unauthorisedly absent his wages have not been paid for which he has filed a petition before the Labour Court. It is pending. Let us await the decision of the Labour Court.

SRI B. I. PATIL.—This person is harassed.

SRI A. LAKSHMI SAGAR.—He does not spell out as to what is the kind of harassment.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ

೪೧೦ ಶ್ರೀ ಕೆ ವಸಂತ ಬಂಗೇರ (ಬೆಳ್ತಂಗಡಿ) —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯವಿಟ್ಟು ಉತ್ತರಿಸುವರೇ ?

(ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಸರ್ಕಾರಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಆಲೋಚಿಸಿದೆಯೇ ?

(ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಜೆ ಹೆಚ್. ಪಟೇಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

(ಅ) ಇಲ್ಲ.

(ಆ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ವಸಂತ ಬಂಗೇರ.—ಸ್ವಾಮಿ, ಇನ್ನು ಮುಂದಾದರೂ ನಮ್ಮ ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಲು ಅನುಮತಿಯನ್ನು ನೀಡಬೇಕು. ಏಕೆಂದರೆ ಅಲ್ಲಿ ಹಾವೆ ಮಣ್ಣು ಹೆಚ್ಚಿನ ರೀತಿಯಲ್ಲಿ ಸಿಕ್ಕುತ್ತಿದೆ. ಈ ಮಣ್ಣಿನಿಂದ ಹೆಂಚನ್ನಾಗಲಿ, ಅಥವಾ ಪಿಂಗಾಣಿ ಸಾಮಾನು ಗಳನ್ನಾಗಲಿ ತಯಾರಿಸಲು ಅನುಕೂಲವಾಗುವಂಥ ಒಂದು ಕಾರ್ಖಾನೆಯನ್ನು ತೆರೆಯಲು ಅನುಮತಿ ಯನ್ನು ನೀಡಬೇಕು.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಬಹಳ ಸೂಕ್ತವಾಗಿದೆ. ಅಲ್ಲಿ ಸಿಕ್ಕ ತಕ್ಕ ಕಚ್ಚಾ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ವಸ್ತುಗಳನ್ನು ತಯಾರಿಸಲು ಸರ್ಕಾರ ಅನುಮತಿಯನ್ನು ಕೊಡುತ್ತದೆ. ಆದರೆ ಆ ಕಾರ್ಖಾನೆಯನ್ನು ನಡೆಸಲು ಕಾಡಿನ ಸೌದೆ ಬೇಕಾಗು ತ್ತದೆಂದು ಕೇಳಬಾರದು. ಕಾಡಿನ ಸೌದೆಯನ್ನು ಉಪಯೋಗಿಸದೇ ಇರುವಂಥ ಕಾರ್ಖಾನೆಯನು ಕೇಳುವುದಾದರೆ ನಾವು ಖಂಡಿತಾ ಅನುಮತಿಯನ್ನು ಕೊಡುತ್ತೇವೆ.

ರಾಯಚೂರು, ಗುಲ್ಬರ್ಗಾ ಹಾಗೂ ಬೀದರ್ ಜಿಲ್ಲೆಗಳ ಬಸ್ಸು ಮಾರ್ಗಗಳನ್ನು

ರಾಷ್ಟ್ರೀಕರಣ ಮಾಡುವುದು.

೫೫೯. ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗಾ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

(ಅ) ಗುಲ್ಬರ್ಗಾ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿಯ ಖಾಸಗಿ ಬಸ್ಸು ಮಾರ್ಗಗಳ ರಾಷ್ಟ್ರೀಕರಣ ಮಾಡುವ ಯೋಜನೆ ಸರ್ಕಾರದವರಲ್ಲಿದೆಯೆ ? ಹಾಗಿದ್ದಲ್ಲಿ ಅದನ್ನು ಯಾವಾಗ ಕಾರ್ಯ ರೂಪಕ್ಕೆ ತರಲಾಗುವುದು ?

(ಆ) ಈ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲು ಉಂಟಾಗಿರುವ ವಿಳಂಬಕ್ಕೆ ಕಾರಣವೇನು?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—

(ಅ) ಮತ್ತು (ಆ) ಗುಲ್ಬರ್ಗಾ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಖಾಸಗಿ ಬಸ್ಸುಗಳ ರಾಷ್ಟ್ರೀಕರಣದ ಕರಡು ಯೋಜನೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ದಿನಾಂಕ

೯-೯-೧೯೮೨ ಮತ್ತು ೧೬-೯-೧೯೮೨ ರಂದು ಪ್ರಕಟಿಸಿದೆ. ಸದರಿ ಯೋಜನೆಯ ಮೇಲೆ ಬಂದಿರುವ ಆಕ್ಷೇಪಣೆ ಆಹ್ವಾನಾಲುಗಳನ್ನು ಸರ್ಕಾರವು ಈಗಾಗಲೇ ವಿಚಾರಿಸಿದೆ. ಈ ಬಗ್ಗೆ ಸೂಕ್ತ ತೀರ್ಮಾನ ವನ್ನು ಸಭೆಯಲ್ಲಿ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್. ಕೆ. ಸಾಂತ.—ಖಾಸಗೀ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ ಎಂದು ಸರ್ಕಾರದವರು ಕಳೆದಸಾರಿಯೇ ಹೇಳಿದ್ದರು ಆದರೆ ಇದವರೆಗೂ ಮಾಡಿಲ್ಲ. ಮತ್ತು ಮಾಡದಿರುವುದಕ್ಕೆ ಕಾರಣ ಏನೂ ಎಂಬುದನ್ನೂ ಹೇಳಿಲ್ಲ, ಈಗಾಲೇ ಮಾನ್ಯ ಸದಸ್ಯರಾದ ವೀರಯ್ಯ ಸ್ವಾಮಿಯವರು ಮಾತನಾಡುವಾಗ ಹೇಳಿದ್ದಾರೆ. ಕೆಂಪು ಬಣ್ಣವನ್ನು ಬಳಿದುಕೊಂಡು ಹೋಗುವಂಥ ಸರ್ಕಾರೀ ಬಸ್ಸುಗಳು ಏನಿವೆ ಅವುಗಳ ಮೇಲೆ ಜನರು ಕೂತು ಪ್ರಯಾಣ ಮಾಡುತ್ತಿದ್ದಾರೆ. ಅಲ್ಲಿ ಪ್ರಯಾಣಿಕರ ಸಂಖ್ಯೆ ಜಾಸ್ತಿ ಇದೆ. ಮಾನ್ಯ ಮಂತ್ರಿಯವರಿಗೆ ಈ ವಿಚಾರ ಗೊತ್ತಿದ್ದರೂ ಖಾಸಗೀ ಬಸ್‌ಗಳ ಮಾರ್ಗ ಗಳನ್ನು ಇವರು ರಾಷ್ಟ್ರೀಕರಣ ಮಾಡುವ ವಿಚಾರದಲ್ಲಿ ಏತಕ್ಕೆ ವಿಳಂಬ ಮಾಡುತ್ತಿದ್ದಾರೆ ? ಖಾಸಗಿ ಬಸ್ಸುಗಳು ಇರುವುದರಿಂದ ನಮ್ಮ ಸಾರಿಗೆ ಸಂಸ್ಥೆಗೆ ಬರತಕ್ಕ ಹಣವೆಲ್ಲಾ ಹೋಗುತ್ತಿದೆ. ಬೆಳಗಾಂನಲ್ಲಿ ಸಾರಿಗೆ ಸಂಸ್ಥೆ ಲಾಭದಾಯಕವಾಗಿ ನಡೆಯುತ್ತಿದೆ, ಗುಲ್ಬರ್ಗಾ, ರಾಯಚೂರುಗಳಲ್ಲಿ ಈ ಪರಿಸ್ಥಿತಿ ಇಲ್ಲ. ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ವಿಚಾರ ಸರ್ಕಾರದವರಿಗೂ ಗೊತ್ತಿದೆ. ಗುಲ್ಬರ್ಗಾ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಏನು ಸ್ಕೀಂ ಇದೆ ಇದರ ಬಗ್ಗೆ ನಾನೂ ಸಾರಿಗೆ ಸಚಿವನಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಅಲ್ಲಿಯವರಿಂದ ಅಪ್ಲಿಕೇಷನ್ಸ್‌ನ್ನು ಕೇಳಲಾಗಿದೆ. ಸಭೆಯಲ್ಲೇ ಇದರ ಬಗ್ಗೆ ಸರ್ಕಾರ ಒಂದು ಫೈನಲ್ ಆರ್ಡರನ್ನು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರ ಕಳಕಳಿ ನನಗೂ ಗೊತ್ತಿದೆ. ಹೈದರಾಬಾದ್ ಕರ್ನಾಟಕದ ಪ್ರದೇಶ, ಗುಲ್ಬರ್ಗಾ, ಬೀದರ್ ಮುಂತಾದ ಕಡೆಗಳಲ್ಲಿ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದಷ್ಟೂ ಬೇಗ ನಮ್ಮ ಪ್ರಯಾಣಿಕರಿಗೆ ತೊಂದರೆ ಆಗುವುದನ್ನು ತಪ್ಪಿಸಬೇಕೆಂಬುದೇ ನಮ್ಮ ಸರ್ಕಾರದ ಇಚ್ಛೆ ಯಾಗಿದೆ. ಆದ್ದರಿಂದ ಸಭೆಯಲ್ಲೇ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಒಂದು ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಮದನಗೋಪಾಲ ನಾಯಕ್.—ಮಾನ್ಯ ಅಧ್ಯಕ್ಷರೆ. ...

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ. ೧೨ ಗಂಟೆಗೆ ಪ್ರಶ್ನೋತ್ತರ ವೇಳೆಯನ್ನು ನಾವು ಮುಗಿಸಬೇಕಾಗಿದೆ. ತಾವು ಈ ರೀತಿ ಮಾತನಾಡುತ್ತಾ ಹೋದರೆ ಸದನದ ಕಾರ್ಯಕಲಾಪಗಳನ್ನು ನಾವು ಯಾವರೀತಿ ಮಾಡಬೇಕು ? ತಾವೆಲ್ಲರೂ ಸಹಕಾರ ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ಇಷ್ಟು ಹೇಳುವ ಬದಲು ಅವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಿದ್ದರೆ ಇಷ್ಟು ಹೊತ್ತಿಗೆ ಪ್ರಶ್ನೆಯೇ ಮುಗಿದು ಹೋಗುತ್ತಿತ್ತು.

ಅಧ್ಯಕ್ಷರು.—ನೀವು ಸಹಕಾರವನ್ನು ಕೊಡದೇ ಹೋದರೆ ನಿಯಮದ ಪ್ರಕಾರ ಒಂದು ಗಂಟೆಕಾಲ ಮಾತ್ರ ಪ್ರಶ್ನೋತರಗಳನ್ನು ತೆಗೆದುಕೊಂಡು ಆ ಸಮಯದಲ್ಲಿ ಎಷ್ಟು ಪ್ರಶ್ನೆಗಳನ್ನು ಕೇಳಲು ಅವಕಾಶ ಕೊಡಬಹುದೋ ಅಷ್ಟನ್ನು ಮಾತ್ರ ಕೊಟ್ಟು ಇನ್ನುಳಿದ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಬೇಕಾಗುತ್ತದೆ. ಈ ಒಂದು ಪದ್ಧತಿ ಪಾರ್ಲಿಮೆಂಟ್‌ನಲ್ಲಿದೆ. ಅದೇರೀತಿ ಇಲ್ಲೂ ಮಾಡೋಣವೆ ?

ಶ್ರೀ ಮದನಗೋಪಾಲ ನಾಯಕ್.—ಮಾನ್ಯ ಅಧ್ಯಕ್ಷರೆ, ಕೇವಲ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುವುದರಿಂದಲೇ ಜನರ ತೊಂದರೆಗಳನ್ನು ನೀಗಿಸುವುದಕ್ಕಾಗುವುದಿಲ್ಲ. ಹೆಚ್ಚು ಹೆಚ್ಚು ಬಸ್ಸುಗಳನ್ನು ಹಾಕಿ, ಅದಕ್ಕೆ ತಕ್ಕಂತೆ ಡಿಪೋಗಳನ್ನೂ ಮಾಡಬೇಕಾಗುತ್ತದೆ. ಇದರ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ ?

ಮತ್ತೊಂದು ವಿಚಾರ ಏಂದರೆ, ಖಾಸಗೀ ಬಸ್ಸುಗಳ ಮತ್ತು ಮೆಟಡಾರ್‌ಗಳ ಹಾವಳಿ ತುಂಬಾ ಜಾಸ್ತಿಯಾಗಿದ್ದು ಇದರಿಂದ ನಮ್ಮ ಸಾರಿಗೆ ಸಂಸ್ಥೆಗೆ ಬರಬೇಕಾದ ಹಣವೆಲ್ಲಾ ಆ ಕಡೆ ಹೋಗುತ್ತಿದೆ. ಸರ್ಕಾರೀ ಸಂಸ್ಥೆ ಹಾನಿಯನ್ನು ಅನುಭವಿಸಬೇಕಾಗಿದೆ. ಇದನ್ನು ತಪ್ಪಿಸುವ ವಿಚಾರದಲ್ಲಿ ತಾವು ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಖಾಸಗೀ ಬಸ್ಸು ಹಾಗೂ ಮೆಟಡಾರ್ ವಾಹನಗಳಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸಾರಿಗೆ ಸಂಸ್ಥೆಗೆ ಹಾನಿಯಾಗುತ್ತಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲದೆ ಪ್ರಯಾಣಿಕರಿಗೂ ಕೂಡ ಸಾಕಷ್ಟು ಸಾರಿಗೆ ಸೌಲಭ್ಯ ಸಿಕ್ಕುತ್ತಿಲ್ಲ. ತಾವು ಹೇಳಿದ ಪ್ರಕಾರ ಬಸ್ ಡಿಪೋಗಳನ್ನು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ತೆರೆಯಬೇಕಾಗಿದೆ. ಈ ಕಾರಣಕ್ಕಾಗಿಯೇ ನಾನು ಒಂದು ಆಬ್ಜಕ್ಷನ್‌ನ್ನು ಕಾಲ್‌ಫಾರ್ ಮಾಡಿದ್ದೇನೆ. ಅದು ಬಂದಮೇಲೆ ಮುಂದಿನ ಕ್ರಮ ಏನು ತೆಗೆದು ಕೊಳ್ಳಬೇಕೋ ಆದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಮಂದನಗೋಪಾಲ ನಾಯಕ್.—ಸದ್ಯದಲ್ಲಿ ಎಂದರೆ ಯಾವಾಗ ಸ್ವಾಮಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಿಂದೆ ನಾನು ಈ ಸಂಸ್ಥೆಯ ಛೇರ್ಮನ್ ಆಗಿದ್ದೆ. ಪ್ರಾಮಾಣಿಕವಾಗಿ ನಾನು ಹೇಳುತ್ತಿದ್ದೇನೆ. ಸದ್ಯ ಸದಲ್ಲೇ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಹೊನ್ನಾಳಿ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಬಸ್ಸುಗಳನ್ನು ಓಡಿಸುವುದು

೫೬೨ ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ದಯೆಯಿಟ್ಟು ಉತ್ತರಿಸುವರೆ ?

(ಅ) ಹೊನ್ನಾಳಿ ತಾಲ್ಲೂಕು ಕೋಟೆಹಾಳು, ಮುರಿಗೊಂಡನಹಳ್ಳಿ, ಕುಂದೂರು, ಪರಗನಹಳ್ಳಿ ಮತ್ತು ಬೀದರ್‌ಗಡ್ಡೆ, ತಿಮ್ಲಾಪುರ ಗ್ರಾಮಗಳಿಗೆ ಬಸ್ಸುಗಳನ್ನು ಓಡಿಸಲು ಸಾರ್ವಜನಿಕರಿಂದ ಒತ್ತಾಯ ಬಿರುವುದು ನಿಜವಲ್ಲವೆ ?

(ಆ) ಹಾಗಿದ್ದಲ್ಲಿ ಮೇಲ್ಕಂಡ ಗ್ರಾಮಗಳಿಗೆ ಬಸ್ಸುಗಳನ್ನು ಓಡಿಸಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—

(ಅ) ನಿಜ.

(ಆ) ರಾಷ್ಟ್ರೀಕರಣವಾಗಿಲ್ಲದ ಒಳನಾಡಿನ ಹಳ್ಳಿಗಳಿಗೆ ಖಾಸಗಿ ವಾಹನವು ಶಿವಮೊಗ್ಗದಿಂದ ಹೊನ್ನಾಳಿ ಪರಗನಹಳ್ಳಿ ಮತ್ತು ಕುಂದೂರು ಮುಖಾಂತರ ದಾವಣಗೆರೆ ಮಾರ್ಗದಲ್ಲಿ ಓಡುತ್ತಿದ್ದು ಈ ಹಳ್ಳಿಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ.

ಶ್ರೀ ಡಿ. ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಗೆ ಮಾನ್ಯ ಸಚಿವರು ಭರವಸೆಯನ್ನು ಕೊಟ್ಟಿದ್ದಾರೆ. ಎರಡನೆಯದಾಗಿ ಹೊನ್ನಾಳಿಯಿಂದ ಕುಂದೂರಿಗೆ ಹೋಗಲು ರಸ್ತೆ ಮಾರ್ಗವಿದೆ. ಇದು ರಾಷ್ಟ್ರೀಕರಣವಾದ ಮೇಲೆ ನ್ಯಾಷನಲ್ ರೋಡ್ ಎಂದು ಹೇಳಿದ ಮೇಲೆ ಖಾಸಗಿಯವರಿಗೆ ಪರ್ಮಿಟ್ ಕೊಡುತ್ತಿಲ್ಲ ಇದರಿಂದ ಏನಾಗಿದೆ ಖಾಸಗಿಯವರು ಬಸ್‌ಗಳನ್ನು ಓಡಿಸುವಂತೆಯೂ ಇಲ್ಲ. ಸರ್ಕಾರದವರೂ ಕೂಡ ಬಸ್‌ಗಳನ್ನು ಓಡಿಸುತ್ತಿಲ್ಲವಾದ ಕಾರಣ ತಾಲ್ಲೂಕ್ ಹೆಡ್ ಕ್ವಾರ್ಟರ್ಸ್‌ಗೆ ಬರುವುದಕ್ಕೆ ಜನರಿಗೆ ಬಹಳ ತೊಂದರೆಯಾಗಿದೆ. ಕಂಕನಾಳ, ಮುಕ್ತಹಳ್ಳಿ, ರಕ್ಕನಾಳದಿಂದ ಹೊನ್ನಾವರದವರೆಗೆ ಶಿವಮೊಗ್ಗದಿಂದ ಬರತಕ್ಕಂಥ ಬಸ್‌ಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಓಡಿಸಲು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಕೆ. ಎಸ್. ಆರ್. ಟಿ. ಸಿ. ಯವರು ಸರ್ವೆ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿರುತ್ತಾರೆ. ಸರ್ವೆ ಮಾಡಿದಮೇಲೆ ಸರ್ವೆ ರಿಪೋರ್ಟ್ ಒಂದ ತಕ್ಷಣ ಬಸ್‌ಗಳನ್ನು ಓಡಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಡಿ. ಜಿ. ಬಸವನಗೌಡ.—ಇದು ರಾಜ್ಯಪಟ್ಟಿದಲ್ಲಿ ಇರತಕ್ಕಂಥ ಪ್ರಶ್ನೆ ಆಗಿರುತ್ತದೆಂದು ಹೇಳುವಾಗ ಎನ್.ಆರ್.ಇ.ಪಿ. ಯಿಂದ ಸಾಕಷ್ಟು ರಸ್ತೆಗಳನ್ನು ಈಗಾಗಲೇ ಸರ್ಕಾರದವರು ನಿರ್ಮಾಣ ಮಾಡಿರುತ್ತಾರೆ. ಇಂಥ ರಸ್ತೆಗಳು ಹಳ್ಳಿಲ್ಲಿ ಇರುತ್ತವೆ ಎನ್ನುವುದನ್ನು ಗಮನಿಸಿ, ಆ ರಸ್ತೆಗಳಲ್ಲಿ ಸರ್ಕಾರಿ ಬಸ್‌ಗಳನ್ನೇ ಓಡಿಸತಕ್ಕಂಥ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಖಾಸಗಿಯವರಿಗೆ ಬಸ್‌ಗಳನ್ನು ಓಡಿಸಲು ಪರ್ಮಿಟ್‌ಗೆ ಇಂತಿಷ್ಟು ಹಣವೆಂದು ನಿಗದಿಮಾಡಿ ಬಸ್‌ಗಳನ್ನು ಓಡಿಸುವುದಕ್ಕೆ ನೋಟಿಫಿಷನ್ ಮಾಡುತ್ತೀರಾ ಎಂದು ಕೇಳುತ್ತೇನೆ.